

# ನೀಲಗುಂದ ಭೀಮೇಶ್ವರ

## ಇತಿಹಾಸ, ವಾಸ್ತುಶಿಲ್ಪದ ಸಮ್ಮಿಲನ

ದಾವಣಗೆರೆ ಜಿಲ್ಲೆಯ ಪುಟ್ಟ ಹಳ್ಳಿ ನೀಲಗುಂದದಲ್ಲಿರುವ ಭೀಮೇಶ್ವರ ದೇಗುಲ, ವಿಶೇಷವಾದ ವೇಸರ ಶೈಲಿಯಲ್ಲಿ ನಿರ್ಮಾಣಗೊಂಡಿದೆ. ಪ್ರಕೃತಿಯ ಮಡಿಲಲ್ಲಿ ಇತಿಹಾಸ, ವಾಸ್ತುಶಿಲ್ಪದ ಪ್ರಾಮುಖ್ಯವನ್ನು ಸಾರುತ್ತಿದೆ.

■ ಜಿ. ನಾಗೇಂದ್ರ ಕಾವೂರು

ಮಂಜುನಾಥ, ಶ್ರೀಕಂಠೇಶ್ವರ, ವಿರೂಪಾಕ್ಷ, ಮಹಾದೇವ, ಮಲ್ಲಿಕಾರ್ಜುನ, ಮಧುಕೇಶ್ವರ, ನನ್ನೇಶ್ವರ, ಮಹಾಬಲೇಶ್ವರ – ನೂರಾರು ಹೆಸರು ಶಿವನಿಗೆ! ಹೀಗೆ ಹಲವು ಹೆಸರುಗಳಿಂದ ಪೂಜೆಗೊಳ್ಳುವ ಶಿವನಿಗಾಗಿಯೇ ನಿರ್ಮಿಸಲಾದ, ಪ್ರಖ್ಯಾತಿ ಹೊಂದಿದ ಹಲವು ದೇವಾಲಯಗಳು ಕರ್ನಾಟಕದಲ್ಲಿವೆ. ಅಂಥದೊಂದು ಪ್ರಮುಖ ಶಿವದೇಗುಲ, ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ಪುಟ್ಟ ಹಳ್ಳಿ ನೀಲಗುಂದದಲ್ಲಿರುವ ಭೀಮೇಶ್ವರ ದೇವಾಲಯ.

‘ಅಮೃತ ಕೆರೆ’ ಎಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿರುವ ವಿಶಾಲ ಕೆರೆಯ ದಡದಲ್ಲಿ ಒಂದು ಕಡೆ ಬೆಟ್ಟ ಗುಡ್ಡಗಳಿದ್ದರೆ, ಮತ್ತೊಂದು ಕಡೆ ಕೆರೆಯೊಳಗೆ ಚಾಚಿರುವ ದಿಬ್ಬದ ಮೇಲೆ ಈ ‘ಭೀಮೇಶ್ವರ’ನ ದೇವಾಲಯ ಇದೆ. ಇತಿಹಾಸ ಮತ್ತು ತನ್ನ ವಾಸ್ತುಶಿಲ್ಪ ಶೈಲಿಯ ದೃಷ್ಟಿಯಿಂದ ಭೀಮೇಶ್ವರ ದೇವಾಲಯ ಗಮನಸೆಳೆಯುವಂತಿದೆ.

ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಈ ದೇವಾಲಯವನ್ನು ಸ್ಥಳೀಯವಾಗಿ ಲಭ್ಯವಿದ್ದ ಬಳಪದ ಕಲ್ಲುಗಳನ್ನು ಬಳಸಿ ನಿರ್ಮಿಸಲಾಗಿದೆ. ದಕ್ಷಿಣ ಮತ್ತು ಉತ್ತರ ಭಾರತೀಯ ಶೈಲಿಗಳ ಸಮ್ಮಿಲನವಾದ ‘ವೇಸರ ಶೈಲಿ’ಯಲ್ಲಿ ನಿರ್ಮಿಸಲಾಗಿದ್ದು, ಮೂರು ಗರ್ಭಗೃಹಗಳನ್ನು ಹೊಂದಿರುವ ದೇವಾಲಯವಾಗಿದೆ. ತಳ ವಿನ್ಯಾಸದಲ್ಲಿ ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಮೂರು ಗರ್ಭಗೃಹಗಳಿದ್ದು ಪ್ರತಿಯೊಂದು ಗರ್ಭಗೃಹವೂ ಅಂತರಾಳವನ್ನು ಹೊಂದಿವೆ. ಮುಖ್ಯ ಗರ್ಭಗುಡಿಯಲ್ಲಿ ಸುಮಾರು 3 ಅಡಿ ಎತ್ತರದ ಶಿವಲಿಂಗವಿದ್ದು, ಗರ್ಭಗುಡಿ ಮೇಲೆ ಗೋಪುರವಿದೆ. ನವರಂಗದ ನಾಲ್ಕು ದಿಕ್ಕುಗಳಲ್ಲಿ ನಯಗೊಳಿಸಿದ ಅಲಂಕೃತ ದುಂಡು ಕಂಬಗಳಿದ್ದು, ಚೌಕಾಕಾರದ ಪೀಠದ ಮೇಲೆ ನಿಂತಿವೆ.

ದೇವಾಲಯದ ಒಳ ಆವರಣದಲ್ಲಿರುವ ದೇವಕೋಷ್ಟಗಳಲ್ಲಿ ಗಣೇಶ, ಮಹಿಷಮರ್ದಿನಿ, ಸಪ್ತಮಾತೃಕೆ ಹಾಗೂ ಯಕ್ಷ ಮೂರ್ತಿಗಳಿವೆ. ಸಭಾಮಂಟಪದ ಪೂರ್ವಕ್ಕೆ ಮುಖ ಮಂಟಪವಿದ್ದು, ಎರಡೂ ಪಾರ್ಶ್ವಗಳಲ್ಲಿ ಮೆಟ್ಟಿಲುಗಳಿವೆ. ಮೆಟ್ಟಿಲುಗಳ ಎರಡೂ ಬದಿಗಳಲ್ಲಿರುವ ಕಾಲ್ಪನಿಕ ಪ್ರಾಣಿಯ ಪಟ್ಟಿಕೆ ಗಮನಸೆಳೆಯುವಂತಿದೆ. ನಾಲ್ಕು ಕಾಲಿನ ಕಾಲ್ಪನಿಕ ಪ್ರಾಣಿಯು ಏಳು ಪ್ರಾಣಿಗಳ ಅಂಗಗಳಿಂದ ಕೂಡಿದೆ. ಹಂದಿಯ ದೇಹ, ಸಿಂಹದ ಕಾಲು, ಆನೆಯ ಸೊಂಡಿಲು, ಮೊಸಳೆಯ ಬಾಯಿ, ಹಸುವಿನ ಕಿವಿ, ಕೋತಿಯ ಕಣ್ಣು ಹಾಗೂ ಬಾಲದ ಭಾಗದಲ್ಲಿ ನವಿಲಿನ ಪುಕ್ಕಗಳನ್ನು ಒಳಗೊಂಡಿದೆ. ಪ್ರಾಣಿಯ ಮೇಲೆ ಯೋಧ ಆಸೀನನಾಗಿರುವ ಶಿಲ್ಪವಿದೆ. ಇಂತಹ ವಿಚಿತ್ರ ಕಾಲ್ಪನಿಕ ಪ್ರಾಣಿಗಳ ಶಿಲ್ಪಗಳು ಬಹಳಷ್ಟು ದೇವಾಲಯಗಳಲ್ಲಿ ಕಾಣಸಿಗುತ್ತವೆ. ಬಹುಶಃ ಈ ಪಟ್ಟಿಕೆಯನ್ನು ಇತರೆಡೆಯಿಂದ ತಂದಿಟ್ಟ ಹಾಗೆ ಕಾಣಿಸುತ್ತದೆ. ಮುಖ ಮಂಟಪದ ಮುಂಭಾಗದಲ್ಲಿ ಸೂರ್ಯ ನಾರಾಯಣ ದೇವರ ಪ್ರತ್ಯೇಕ ಗುಡಿಯಿದೆ.

